## ಬೆಚ್ಚಿ ಬೀಳಿಸುವಂತಿದೆ

'ಸ್ವಚ್ಛ ಭಾರತದ ಬೆಚ್ಚಿ ಬೀಳಿಸುವ ಬಿಂಬಗಳು', ಸುಮಂಗಲಾ ಅವರ ಮುಖಪುಟ ಲೇಖನ (ಸುಧಾ, ಅಕ್ಟೋಬರ್ 11) ದಲ್ಲಿ ಮೂಡಿಬಂದಿರುವ ಭಯಾನಕ ಬಿಂಬಗಳು ಜಗತ್ತನ್ನು ಬೆಚ್ಚಿ ಬೀಳಿಸುವಂಥವು. ಸರ್ಕಾರ ಇರುವುದು ಬರೀ ತೋರಿಕೆಗಾಗಿ, ಪ್ರಚಾರಕ್ಕಾಗಿ, ಅಧಿಕಾರಕ್ಕಾಗಿ ಸಾಧನೆಗಳನ್ನು ಮಾಧ್ಯಮ ಗಳಲ್ಲಿ ವೈಭವೀಕರಿಸುವುದಕ್ಕಾಗಿ ಎಂಬುದು ಸತ್ಯ. ಆದರೆ ಜನರ ಮೂಲಭೂತ ಸಮಸ್ಯೆಗಳನ್ನು ನಿವಾರಿಸುವಲ್ಲಿ ಈವರೆಗಿನ ಎಲ್ಲ ಸರ್ಕಾರಗಳು ವಿಫಲವಾಗಿವೆ ಎಂಬುದಕ್ಕೆ ಈ ದುರಂತ ಚಿತ್ರಣ ಜ್ವಲಂತ ಸಾಕ್ಷಿಯಾಗಿದೆ.

—ನರೇಂದ್ರ ಸಿರಕಜೆ, ಮೈಸೂರು, ಮುಕುಂದ ಹೆರಕಲ್ಲ ಕಲಬುರಗಿ, ತೂರಗಲ್ಲ ಉಮೇಶ ರಾಮದುರ್ಗ, ಶಕುಂತಲ ರೆಡ್ಡಿ ರಾಯಾಪುರ, ಬಳ್ಳಾರಿ, ಪ.ಚಂದ್ರಕುಮಾರ ಗೌನಹಳ್ಳಿ, ಕೆ.ವಿ. ರಾಜಲಕ್ಷ್ಮಿ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ, ಪಿ.ಗೋವಿಂದರಾಜ್ ಶಿವಮೊಗ್ಗ

## ಕಣ್ಣು ತೆರೆಸುವಂತಿದೆ

ಮುಖಪುಟ ಲೇಖನ ನೈಜ ಚಿತ್ರಗಳನ್ನು ಒಳಗೊಂಡಿದ್ದು ಸರ್ಕಾರದ ಕಣ್ಣು ತೆರೆಸುವಂತಿದೆ.

—ಕೆ.ಎಸ್.ಪ್ರಭಾಕರಗುಪ್ತ ಹಾಸನ

## ವಿಷಾದನೀಯ

ದೇಶದಲ್ಲಿ ಮಲಗುಂಡಿ ಸ್ವಚ್ಛತಾ ಕಾನೂನು ಜಾರಿಯಾಗಿದ್ದರೂ ಅದು ಬರೀ ಕಾಗದಕ್ಕೆ ಮಾತ್ರ ಸೀಮಿತವಾಗಿರುವುದು ವಿಷಾದನೀಯ.

— ಅರವಿಂದ ಜಿ.ಜೋಷಿ, ಮೈಸೂರು

## ಮುದ ನೀಡಿದ ಲೇಖನ

ಹೊನ್ನಾವರದ 'ರಾಣಿ'ಯರು! (ಚಿತ್ರ–ಲೇಖನ: ಕೃಷ್ಣ ಶಿರೂರ) ಕಣ್ಣಿಗೆ ಇಂಪು ನೀಡಿತು. ಮಿರಿ ಮಿರಿ ಮಿಂಚುತ್ತಿರುವ ವೀಳ್ಯದೆಲೆಗಳನ್ನು ನೋಡಿದರೆ ಪ್ರತ್ಯಕ್ಷವಾಗಿ ಕಂಡಂತೆ ಭಾಸವಾಯಿತು. ಬೇಡಿಕೆಯ ಉತ್ತುಂಗದಲ್ಲಿದ್ದ ವೀಳ್ಯದೆಲೆಗೆ ಕ್ರಮೇಣ ಬೇಡಿಕೆ ಇಳಿಕೆಯಾಗುತ್ತಿರುವುದು ಖೇದದ ವಿಷಯ.

—ಸುಂದರ್, ಬೆಂಗಳೂರು

## ಪಾಕಿಸ್ತಾನಕ್ಕೆ ವೀಳ್ಯದೆಲೆ

ಹೊನ್ನಾವರದಲ್ಲಿ ಸದಾ ಕಂಗೊಳಿಸುವ 'ರಾಣಿ' ಎಲೆ ಪೆಂಡಿಗಳನ್ನು ಪಾಕಿಸ್ತಾನಕ್ಕೆ ರವಾನಿಸುವ ಮಾರ್ಕೆಟ್ ರಾಣೇಬೆನ್ನೂರು ಎಂದು ಚಿತ್ರ ಬರಹದಿಂದ ತಿಳಿಯಿತು.

—ರಾಜಶೇಖರ ಹಾದಿಮನಿ, ಧಾರವಾಡ

## ಕಾರಂತರು-ಖುಷಿ

'ಕಾರಂತರು, ಮೂಕಜ್ಜಿ ಮತ್ತು ಬಿಟ್ಟ ಸ್ಥಳ' (ಪಿ. ಶೇಷಾದ್ರಿ) ಲೇಖನ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ, ಕಡಲ ತಡಿಯ ಭಾರ್ಗವ ಕೋಟ ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು,




ಬೆಟ್ಟದ ಜೀವ ಮುಂತಾದ ಕೃತಿಗಳನ್ನು ಮೆಲುಕು ಹಾಕಿತು. ಕಾರಂತರನ್ನು ಸ್ವತಃ ಕಂಡ ನನಗೆ ತುಂಬ ಖುಷಿ ಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ

## ಮನ ತುಂಬಿದ ಮೆಲುಕು

ಶಿವರಾಮ ಕಾರಂತರ ಬಗ್ಗೆ ಲೇಖಕರು ತಮಗಿರುವ ಪ್ರೀತಿ, ಅಭಿಮಾನ, ಭಯದ ಒಂದಷ್ಟು ವಿಚಾರಗಳನ್ನು ತುಂಬಾ ಮಾರ್ಮಿಕವಾಗಿ ವಿವರಿಸಿದ್ದಾರೆ. ಶಿವರಾಮ ಕಾರಂತ ರಚಿತ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ 'ಮೂಕಜ್ಜಿಯ ಕನಸುಗಳು' ದೃಶ್ಯ ಮಾಧ್ಯಮದ ಮೂಲಕ ಇನ್ನಷ್ಟು ಖ್ಯಾತಿ ಗಳಿಸುವಂತಾಗಲಿ.

— ತಾರಾ ಹೆಗಡೆ, ಶಿರಸಿ

## ಕಥೆ ಚೆನ್ನಾಗಿದೆ

'ಮಿಡಿದ ತಂತಿ' ಕಥೆ (ಗೀತಾ ಕುಂದಾಪುರ) ಚೆನ್ನಾಗಿದೆ. ಆಕಾಶನಂಥ ಮಕ್ಕಳ ಬಗ್ಗೆ ಸಾಕಷ್ಟು ಓದಿದ್ದೇವೆ, ಕಂಡಿದ್ದೇವೆ. ಕತೆಗಾರ್ತಿಯ ಕಲ್ಪನೆಯ ಕೂಸಾದ ರಾಜೇಶನಂಥ ಮಕ್ಕಳು ಬೇಕಾಗಿದ್ದಾರೆ.

—ಕೊಹಿಮ, ಬಸರಕೋಡು, ಎಸ್.ವಿಜಯ ಕುಮಾರಿ ಬೆಂಗಳೂರು

### ಬೇಂದ್ರೆ ಸ್ಮೃತಿ ಕವನ ಸ್ಪರ್ಧೆ

ದ.ರಾ.ಬೇಂದ್ರೆ ಕಾವ್ಯಕೂಟದ 12ನೇ ವರ್ಷದ ಸಂಭ್ರಮದ ಅಂಗವಾಗಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 'ದ.ರಾ.ಬೇಂದ್ರೆ ಸ್ಮೃತಿ ಕವನ ರಚನಾ ಸ್ಪರ್ಧೆ' ಏರ್ಪಡಿಸಿದೆ. ಒಬ್ಬ ವಿದ್ಯಾರ್ಥಿ ಒಂದು ಕವನ ಮಾತ್ರ ಕಳುಹಿಸಬಹುದು. ಕವನದ ಜತೆಯಲ್ಲಿ ಆಯಾ ಕಾಲೇಜಿನ ಪ್ರಾಧ್ಯಾಪಕ ರೊಬ್ಬರಿಂದ ಪಡೆದ ಅಧಿಕೃತ ಪರಿಚಯ ಪತ್ರ ಲಗತ್ತಿಸಿರಬೇಕು.

ಕವನ ಕಳುಹಿಸಲು ಕೊನೆಯ ದಿನ ನವೆಂಬರ್ 20. ವಿಳಾಸ: ಡಾ.ಜಿ.ಕೃಷ್ಣಪ್ಪ, ಅಧ್ಯಕ್ಷರು, ದ.ರಾ.ಬೇಂದ್ರೆ ಕಾವ್ಯಕೂಟ, ನಂ 22, ಶ್ರೀ ಗುರುದತ್ತ ನಿಲಯ, ಒಂದನೇ ಅಡ್ಡರಸ್ತೆ, ನೇತಾಜಿ ನಗರ, ಮತ್ತಿಕೆರೆ ಬೆಂಗಳೂರು. -54, ಸಂಪರ್ಕ: 9972109209

## ಮನಸೂರೆಗೊಂಡ 'ಮಾಂಟೊ'

'ಮತ್ತೆ ಮತ್ತೆ ಕಾಡುವ ಬೇಟೆಗಾರ 'ಮಾಂಟೊ' (ದಿಲಾವರ್ ರಾಮದುರ್ಗ)ಲೇಖನ ಮನಮಿಡಿಯುವಂತಿದೆ. ಖ್ಯಾತ ಉರ್ದು ಕತೆಗಾರ ಸಾದತ್ ಹಸನ್ ಮಾಂಟೊ ಅವರ ಅನೇಕ ಕತೆಗಳು ಈ ಹಿಂದೆ ಕನ್ನಡಿಗರಿಗೆ ಪರಿಚಯವಾಗಿದ್ದು ಜನಪ್ರಿಯವಾಗಿವೆ. ಅವರ ಬಗೆಗಿನ ಸಿನಿಮಾ ನೋಡಲು ನಾನು ಕಾತುರರಾಗಿದ್ದೇನೆ.

—ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

## ಸಾಹಾ ಮಹಾ ವಿಜ್ಞಾನಿ

'ಬಹುರೂಪಿ ಸಾಹಾ 125' (ಪ್ರೊ. ಸವ್ಯಸಾಚಿ ಚಟರ್ಜಿ) ಬರಹ ತುಂಬ ಚೆನ್ನಾಗಿತ್ತು. ಸವಾಲಿನ ಹಾದಿಯಲ್ಲಿ ಅರಳಿದ ಬಹುರೂಪಿ ಸಾಹಾ ಮಹಾ ವಿಜ್ಞಾನಿ, ದೇಶ ಭಕ್ತ ಹಾಗೂ ಭಾರತದ ಶ್ರೇಷ್ಠ ಪುತ್ರರು.

—ರತ್ನಾಕರ ಹೆಗಡೆಕಟ್ಟೆ, ಮೂಡುಬಿದಿರೆ

## ಮಹಿಳೆಯರಿಗೆ ಉಪಯುಕ್ತ

ಆರೋಗ್ಯ ಅಂಕಣದಲ್ಲಿ 'ಋತುಬಂಧದ ನಂತರವೂ ರಕ್ತಸ್ರಾವವೇ?' (ಡಾ. ವೀಣಾ ಎಸ್. ಭಟ್) ಲೇಖನ ಮಹಿಳೆಯರ ಸಮಸ್ಯೆಗಳಿಗೆ ವಿವರವಾದ ಉತ್ತರ ನೀಡಿದೆ. ಇದು ಕೆಲವು ಮಹಿಳೆಯರಲ್ಲಿ ಸಾಮಾನ್ಯ ಸಮಸ್ಯೆಯಾಗಿದೆ. ಮುಟ್ಟು ನಿಂತ ಮೇಲೆ ರಕ್ತಸ್ರಾವ ಕಾಣಿಸಿಕೊಂಡಾಗ ಸ್ವಲ್ಪವೂ ನಿರ್ಲಕ್ಷ್ಯ ಮಾಡದೇ ತಜ್ಞ ವೈದ್ಯರಿಂದ ಸೂಕ್ತವಾದ ತಪಾಸಣೆ ಮಾಡಿಸಲೇಬೇಕು. ತಡ ಮಾಡಿದರೆ ಗರ್ಭಕೋಶ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆ ಇರುತ್ತದೆ.

—ಪ್ರಾರ್ಥನಾ ಹೇಮಂತಕುಮಾರ, ಬೆಂಗಳೂರು

## ಸಾಂದರ್ಭಿಕ ಬರಹ

'ಕನ್ನಡ ನುಡಿ ತೇರ ಏರುತಾರ ಕಂಬಾರ' (ಮಹತಿ) ಲೇಖನ ಸಾಂದರ್ಭಿಕ ವಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಹೊತ್ತಿರುವುದು ಅನೇಕ ನಿರೀಕ್ಷೆಗಳನ್ನು ಮೂಡಿಸಿದೆ. ಈ ಜ್ಞಾನಪೀಠ ಪ್ರಶಸ್ತಿ ವಿಜೇತರಿಂದ 'ಹೇಳತೇನ ಕೇಳಾ' ಕೇಳಲು ಅತಿ ಉತ್ಸುಕನಾಗಿ ಸಮ್ಮೇಳನಕ್ಕೆ ಧಾರವಾಡದತ್ತ 'ಹೊಂಟೆನ್ವಿ' ನಾನು.

—ನಾರಾಯಣ ಯಾಜಿ, ಶಿರಾಲಿ, ಎಚ್.ಆನಂದಕುಮಾರ್ ಚಿತ್ರದುರ್ಗ

## 3ಡಿ ಲೋಕಕ್ಕೆ ಕರೆದೊಯ್ಯುವಂತಿದೆ!

ಪ್ರವಾಸ ಲೇಖನ 'ಪಟ್ಟಾಯ! 3ಡಿ ನೋಟ ' (ಎಸ್. ಜಂಬುಕೇಶ್ವರ) ಚಿತ್ರ–ಬರಹ ನಮ್ಮನ್ನು 3ಡಿ ಲೋಕಕ್ಕೆ ಕರೆದೊಯ್ದಂತಿದೆ. ಇಲ್ಲಿನ ಚಿತ್ರಗಳನ್ನು ಪರ್ಫೆಕ್ಷನ್ ಮತ್ತು ಸ್ಪೆಸಿಫಿಕ್ ತಂತ್ರಗಾರಿಕೆಯಲ್ಲಿ ರಚಿಸಿರುವುದು ವಿಶೇಷ.

—ವಿ. ಹೇಮಂತಕುಮಾರ, ಬೆಂಗಳೂರು